# ಗುಲಬರ್ಗಾ ವಿಶ್ವವಿದ್ಯಾಲಯ

" ಜ್ಞಾನಗಂಗಾ "

ಗುಲಬರ್ಗಾ ೫೮೫ ೧೦೬

# ಮಾಹಿತಿ ಹಕ್ಕು ಅಧಿನಿಯಮ ೨೦೦೫ ರ ಕೈಪಿಡಿ

(ನವೀಕರಣ 14-05-2010)

# ಪರಿವಿಡಿ


| ಕ್ರ. ಸಂ. | ವಿವರಗಳು | ಪುಟ ಸಂಖ್ಯೆ |
|---|---|---|
| 1 | 4 (1) (b) (i): ವಿಶ್ವವಿದ್ಯಾಲಯ, ಕಾರ್ಯಚಟುವಟಿಕೆ, ಕರ್ತವ್ಯ ಹಾಗೂ ಇತರ ಮಾಹಿತಿಗಳ ವಿವರ | 1-4 |
| 2 | 4 (1) (b) (ii): ವಿಶ್ವವಿದ್ಯಾಲಯದ ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರ ಮತ್ತು ಕರ್ತವ್ಯಗಳು | 4-10 |
| 3 | 4 (1) (b) (iii): ಮೇಲ್ವಿಚಾರಣೆ, ಮಾರ್ಗಗಳು ಹಾಗೂ ಹೊಣೆಗಾರಿಕೆಯು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಲಾಗುವ ಪದ್ಧತಿ | 10-12 |
| 4 | 4 (1) (b) (iv): ಕಾರ್ಯನಿರ್ವಹಣೆಗೆ ವಿಶ್ವವಿಧ್ಯಾಲಯವು ನಿಗದಿ ಪಡಿಸಿದ ಮಾರ್ಗಸೂಚಿಗಳು | 13-17 |
| 5 | 4 (1) (b) (v): ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ನೌಕರರು ಕರ್ತವ್ಯ - ನಿರ್ವಹಣೆಯಲ್ಲಿ ಬಳಸುವ ನಿಯಮಗಳು, ಸೂಚನೆಗಳು ಹಾಗೂ ಕೈಪಿಡಿಗಳ ಪಟ್ಟಿ. | 17 |
| 6 | 4 (1) (b) (vi): ವಿಶ್ವವಿದ್ಯಾಲಯವು ಹೊಂದಿರುವ ಹಾಗೂ ನಿರ್ಬಂಧಿಸುವ ವಿವಿಧ ದಾಖಲೆಗಳ ಪಟ್ಟಿ. | 17-18 |
| 7 | 4 (1) (b) (vii): ಆಡಳಿತ ವ್ಯವಸ್ಥೆಯಲ್ಲಿ ಸಲಹೆ/ಸೂಚನೆ ನೀಡಲು ರಚಿಸಲಾಗಿರುವ ಸಮಿತಿಗಳು ಹಾಗೂ ಸಮಿತಿ ಸಭೆಗಳಿಗೆ, ಸಾರ್ವಜನಿಕ ಪ್ರವೇಶ ಅಥವಾ ಸಭೆಯ ನಡುವಳಿಗಳು ಸಾರ್ವಜನಿಕರಿಗೆ ಮುಕ್ತವಾಗಿರುವ ವಿವರ | 18 |
| 8 | 4 (1) (b) (viii): ಬೋರ್ಡುಗಳು, ಕೌನ್ಸಿಲಗಳು, ಸಮಿತಿಗಳು ಹಾಗೂ ಇತರ ಸಂಸ್ಥೆಗಳು. | 19-32 |
| | (i) ಸಿಂಡಿಕೇಟ್ ಸದಸ್ಯರ ಪಟ್ಟಿ | 20-21 |
| | (ii) ವಿದ್ಯಾವಿಷಯ ಪರಿಷತ್ತಿನ ಸದಸ್ಯರ ಪಟ್ಟಿ | 21-23 |
| | (ii) ಹಣಕಾಸು ಸದಸ್ಯರ ಪಟ್ಟಿ | 23 |
| | (ii) ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯ ಸದಸ್ಯರು | 24 |
| | (ii) ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ತು ಮತ್ತು ಇತರ ಮಂಡಳಿಗಳನ್ನು ರಚಿಸುವ ವಿಧಾನ | 25-32 |
| 9 | 4 (1) (b) (ix): ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಪಟ್ಟಿ. | 33-117 |
| | (i) ವಿಶ್ವವಿದ್ಯಾಲಯದ ಅಧಿಕಾರಿಗಳು | 33-35 |
| | (ii) ಕುಲಪತಿಗಳ ಆಪ್ತ ಕಾರ್ಯಾಲಯ | 35-36 |
| | (iii) ಕುಲಸಚಿವರ ಆಪ್ತ ಕಾರ್ಯಾಲಯ | 37 |
| | (v) ಆಡಳಿತ ವಿಭಾಗ | 38-40 |
| | (vi)ಪ. ಜಾ./ಪ.ಪಂ. ಸೆಲ್/ನಿವೃತಿ ವೇತನ ಸೆಲ್ ಮತ್ತು ಆಡಳಿತ ಉಗ್ರಾಣ | 41-42 |
| | ಎನ್. ಎಸ್. ಎಸ್. | 42 |
| | (vii) ಸಾಮಾನ್ಯ ಗಣಕ ಕೇಂದ್ರ | 44 |
| | (viii) ವಿದ್ಯಾಮಂಡಳ ವಿಭಾಗಿ | 43-46 |
| | (ix) ಅಭಿವೃದ್ಧಿ ವಿಭಾಗ | 46-47 |
| | (xi) ವಿಶ್ವವಿದ್ಯಾಲಯ ಅಂಕಿ -ಸಂಖ್ಯೆ ಘಟಕ | 47-48 |
| | (xii) ಇಂಜಿನಿಯರಿಂಗ ವಿಭಾಗ | 49-53 |
| | (xiii) ಹಣಕಾಸು ವಿಭಾಗ | 54-58 |
| | (xiv) ಪರೀಕ್ಷಾ ವಿಭಾಗ | 58-63 |
| | (xv) ಗ್ರಂಥಾಲಯ | 64-70 |
| | (xvi) ಕಾಲೇಜು ಅಭಿವೃದ್ಧಿ ಮಂಡಳಿ | 70 |
| | (xvii) ಗಣಕ ಕೇಂದ್ರ | 70-71 |
| | (xviii) ಆರೋಗ್ಯ ಕೇಂದ್ರ | 71 |
| | (xix) ವಿಶ್ವವಿದ್ಯಾಲಯ ವಿಜ್ಞಾನ ಉಪಕರಣಗಳ ಕೇಂದ್ರ (ಯುಸಿಕ್) | 71-72 |
| | (xx) ವಿಶ್ವವಿದ್ಯಾಲಯದ ವಸತಿ ಗೃಹಗಳು | 72-73 |
| | (xxi) ವಿಶ್ವವಿದ್ಯಾಲಯದ ಶಾಲೆ | 74 |
| | (xxii) ಉದ್ಯಾನವನ ವಿಭಾಗ | 75 |

| | | |
|---|---|---|
| | (xxiii) ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಮತ್ತು ಸ್ನಾತಕೋತ್ತರ ಕೇಂದ್ರಗಳು | 76-79 |
| 10 | 4 (1) (b) (x): ನಿಯಮಾವಳಿಗಳ ಪ್ರಕಾರ ಅಧಿಕಾರಿ/ನೌಕರರು ಮಾಸಿಕ ಸಂಭಾವನೆ ಪಡೆಯುವ ಮಾಹಿತಿ | 79-120 |
| 11 | 4 (1) (b) (xi): ಆಯವ್ಯಯದ ಅಂದಾಜು ಮತ್ತು ಹಂಚಿಕೆಗಳ ವಿವರ | 121-122 |
| 12 | 4 (1) (b) (xii): ಸಹಾಯಧನದ ಕಾರ್ಯಕ್ರಮಗಳ ಅನುಷ್ಠಾನ ಮತ್ತು ವಿವರಗಳು | 123 |
| 13 | 4 (1) (b) (xiii**):** ರಿಯಾಯತಿ ಮತ್ತು ಪರವಾನಗಿಯನ್ನು ಅಧಿಕೃತವಾಗಿ ಪಡೆದ ಫಲಾನುಭವಿಗಳ ವಿವರಗಳು | 123 |
| 14 | 4 (1) (b) (xiv): ವಿದ್ಯುನ್ಮಾನ ರೂಪದಲ್ಲಿರುವ ಮಾಹಿತಿಯ ವಿವರ | 123 |
| 15 | 4 (1) (b) (xv): ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಂಥಾಲಯ ನೀಡುವ ಸೌಲಭ್ಯ | 123 |
| 16 | 4 (1) (b) (xvi): ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮಗಳ ವಿವರ | 124 |
| 17 | 4 (1) (b) (xvii): ಇನ್ನಿತರ ಮಾಹಿತಿ, ಅನುಬಂಧ – ಅರ್ಜಿ ನಮೂನೆಗಳು | 125-131 |

# ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಕುಲಾಧಿಪತಿಗಳು

ಸಮಕುಲಾಧಿಪತಿಗಳು

ಕುಲಪತಿಗಳು

## ವಿಶ್ವವಿದ್ಯಾಲಯದ ಅಧಿಕಾರಿಗಳು

## ವಿಶ್ವವಿದ್ಯಾಲಯದ ಪ್ರಾಧಿಕಾರಗಳು

- ಸಿಂಡಿಕೇಟ್
- ವಿದ್ಯಾವಿಷಯಕ ಪರಿಷತ್ತು
- ಹಣಕಾಸು ಸಮಿತಿ
- ಯೋ.ಮೇ.ಮೌ.ಮಂಡಳಿ

---

- ಕುಲಸಚಿವರು
- ಕುಲಸಚಿವರು (ಮೌಲ್ಯಮಾಪನ)
  - ಉ.ಕು.ಸ.(ಪರೀಕ್ಷೆ)
- ಡೀನರು
- ಗ್ರಂಥಪಾಲಕರು
- ಹಣಕಾಸು ಅಧಿಕಾರಿಗಳು
- ನಿರ್ದೇಶಕರು, ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿ
- ನಿರ್ದೇಶಕರು ವಿದ್ಯಾರ್ಥಿಕಲ್ಯಾಣ
- ನಿರ್ದೇಶಕರು ಶಾರೀರಿಕ ಶಿಕ್ಷಣ
- ನಿರ್ದೇಶಕರು ಕಾಲೇಜು ಅಭಿವೃದ್ಧಿ ಮಂಡಳಿ

ಡೀನರು:

- ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ
- ಕಲಾ ನಿಕಾಯ
- ಸಮಾಜ ವಿಜ್ಞಾನ ನಿಕಾಯ
- ವಾಣಿಜ್ಯ ಮತ್ತು ಮ್ಯಾನೆಜಮೆಂಟ ನಿಕಾಯ
- ಶಿಕ್ಷಣ ನಿಕಾಯ
- ಕಾನೂನು ನಿಕಾಯ

೧. ಪ್ರತಿಯೊಂದು ನಿಕಾಯದಲ್ಲಿ ವಿವಿಧ ವಿಷಯಗಷ ಸ್ನಾತಕೋತ್ತರ ವಿಭಾಗಗಳಿದ್ದು,ಪ್ರಾಧ್ಯಾಪಕರು, ಪ್ರವಾಚಕರು ಮತ್ತು ಉಪನ್ಯಾಸಕರನ್ನು ಒಳಗೊಂಡಿರುತ್ತದೆ.

೨. ಪ್ರತಿಯೊಂದು ವಿಷಯಕ್ಕೆ ಸ್ನಾತಕಪೂರ್ವ ಮತ್ತು ಸ್ನಾತಕೋತ್ತರ ಅಧ್ಯಯನ ಮಂಡಳಿಗಳಿದ್ದು ಸ್ನಾತಕೋತ್ತರ ವಿಭಾಗದ ಅಧ್ಯಕ್ಷರು ಅಧ್ಯಯನ ಮಂಡಳಿಯ ಮುಖ್ಯಸ್ಥರಾಗಿರುತ್ತಾರೆ.

೩. ಪ್ರತಿಯೊಂದು ವಿಭಾಗದಲ್ಲಿ ವಿಭಾಗೀಯ ಮಂಡಳಿಯಿದ್ದು ಶಿಕ್ಷಕರು ಮಂಡಳಿಯ ಸದಸ್ಯರಾಗಿರುತ್ತಾರಿ. ವಿಭಾಗದ ಅಧ್ಯಕ್ಷರು ಮಂಡಳಿಯ ಮುಖ್ಯಸ್ಥರಾಗಿ ವಿಭಾಗದ ಆಡಳಿತಾತ್ಮಕ ತೀರ್ಮಾನಗಷನ್ನು ತೆಗೆದುಕೊಳ್ಳುತ್ತಾರೆ.

ಕುಲಸಚಿವರು:

- ಎನ್.ಎಸ್.ಎಸ್. ಸಂಯೋಜಕರು
- ವೈದ್ಯಾಧಿಕಾರಿಗಳು
- ನಿರ್ದೇಶಕರು ಪ್ರಸಾರಾಂಗ
- ಸ್ಥಳೀಯ ಅಭಿಯಂತರರು
- ಮುಖ್ಯಸ್ಥರು ಗಣಕಯಂತ್ರ ಕೇಂದ್ರ
- ಮುಖ್ಯಸ್ಥರು ಯುಸಿಕ್
- ನೋಡಲ ಅಧೀಕಾರಿಗಳು ಅಂಕಿ-ಸಂಖ್ಯೆ ಘಟಕ
- ವಿಶ್ವವಿದ್ಯಾಲಯ ಶಾಲೆ

ಕೆಳಕಂಡ ವಿಭಾಗಗಳ ಆಡಳಿತ ನಿರ್ವಹಣೆಗಾಗಿ ಉಪ ಕುಲಸಚಿವರ ಮೇಲ್ವಿಚಾರಣೆ ನೆರವಿನೊಂದಿಗೆ

- ಆಡಳಿತ ವಿಭಾಗ
- ಶೈಕ್ಷಣಿಕ ವಿಭಾಗ
- ಅಭಿವೃದ್ಧಿ ವಿಭಾಗ
- ಪ. ಜಾ., ಪ.ಪಂ. ಘಟಕ
- ಉಗ್ರಾಣ
- ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತು ವಿಭಾಗ

ಪ್ರತಿ ವಿಭಾಗವು ಕಚೇರಿ ಅಧೀಕ್ಷಕರು, ಸಹಾಯಕ ಕಚೇರಿ ಅಧೀಕ್ಷಕರು, ಪ್ರದಸ., ಎದಸ., ಶೀಘ್ರಲಿಪಿಕಾರರು, ಬೆರಳಚ್ಚುಗಾರರು, ಸಿಪಾಯಿಗಳನ್ನು ಒಳಗೊಂಡಿರುತ್ತದೆ.

# ಪರಿವಿಡಿ


| ಕ್ರ. ಸಂ. | ವಿವರಗಳು | ಪು. ಸಂಖ್ಯೆ |
|---|---|---|
| 1 | 4 (1) (b) (i): ವಿಶ್ವವಿದ್ಯಾಲಯ, ಕಾರ್ಯಚಟುವಟಿಕೆ, ಕರ್ತವ್ಯ ಹಾಗೂ ಇತರ ಮಾಹಿತಿಗಳ ವಿವರ | 1-4 |
| 2 | 4 (1) (b) (ii): ವಿಶ್ವವಿದ್ಯಾಲಯದ ಅಧಿಕಾರಿ ಮತ್ತು ಸಿಬ್ಬಂದಿಗಳ ಅಧಿಕಾರ ಮತ್ತು ಕರ್ತವ್ಯಗಳು | 4-9 |
| 3 | 4 (1) (b) (iii): ಮೇಲ್ವಿಚಾರಣೆ, ಮಾರ್ಗಗಳು ಹಾಗೂ ಹೊಣೆಗಾರಿಕೆಯು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸಲಾಗುವ ಪದ್ಧತಿ | 9-12 |
| 4 | 4 (1) (b) (iv): ಕಾರ್ಯನಿರ್ವಹಣೆಗೆ ವಿಶ್ವವಿದ್ಯಾಲಯವು ನಿಗದಿ ಪಡಿಸಿದ ಮಾರ್ಗಸೂಚಿಗಳು | 12 |
| 5 | 4 (1) (b) (v): ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ನೌಕರರು ಕರ್ತವ್ಯ - ನಿರ್ವಹಣೆಯಲ್ಲಿ ಬಳಸುವ ನಿಯಮಗಳು, ಸೂಚನೆಗಳು ಹಾಗೂ ಕೈಪಿಡಿಗಳ ಪಟ್ಟಿ. | 12-16 |
| 6 | 4 (1) (b) (vi): ವಿಶ್ವವಿದ್ಯಾಲಯವು ಹೊಂದಿರುವ ಹಾಗೂ ನಿರ್ಬಂಧಿಸುವ ವಿವಿಧ ದಾಖಲೆಗಳ ಪಟ್ಟಿ. | 16-18 |
| 7 | 4 (1) (b) (vii): ಆಡಳಿತ ವ್ಯವಸ್ಥೆಯಲ್ಲಿ ಸಲಹೆ/ಸೂಚನೆ ನೀಡಲು ರಚಿಸಲಾಗಿರುವ ಸಮಿತಿಗಳು ಹಾಗೂ ಸಮಿತಿ ಸಭೆಗಳಿಗೆ, ಸಾರ್ವಜನಿಕ ಪ್ರವೇಶ ಅಥವಾ ಸಭೆಯ ನಡುವಳಿಗಳು ಸಾರ್ವಜನಿಕರಿಗೆ ಮುಕ್ತವಾಗಿರುವ ವಿವರ | 18 |
| 8 | 4 (1) (b) (viii): ಬೋರ್ಡುಗಳು, ಕೌನ್ಸಿಲಗಳು, ಸಮಿತಿಗಳು ಹಾಗೂ ಇತರ ಸಂಸ್ಥೆಗಳು. | 18-31 |
| | (i) ಸಿಂಡಿಕೇಟ್ ಸದಸ್ಯರ ಪಟ್ಟಿ | |
| | (ii) ವಿದ್ಯಾವಿಷಯ ಪರಿಷತ್ತಿನ ಸದಸ್ಯರ ಪಟ್ಟಿ | |
| | (ii) ಹಣಕಾಸು ಸದಸ್ಯರ ಪಟ್ಟಿ | |
| | (ii) ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಳಿಯ ಸದಸ್ಯರು | |
| | (ii) ಸಿಂಡಿಕೇಟ್, ವಿದ್ಯಾವಿಷಯಕ ಪರಿಷತ್ತು ಮತ್ತು ಇತರ ಮಂಡಳಿಗಳನ್ನು ರಚಿಸುವ ವಿಧಾನ | |
| 9 | 4 (1) (b) (ix): ವಿಶ್ವವಿದ್ಯಾಲಯದ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಪಟ್ಟಿ. | 31-102 |
| | (i) ವಿಶ್ವವಿದ್ಯಾಲಯದ ಅಧಿಕಾರಿಗಳು | |
| | (ii) ಕುಲಪತಿಗಳ ಆಪ್ತ ಕಾರ್ಯಾಲಯ | |
| | (iii) ಕುಲಸಚಿವರ ಆಪ್ತ ಕಾರ್ಯಾಲಯ | |
| | (v) ಆಡಳಿತ ವಿಭಾಗ | |
| | (vi)ಪ. ಜಾ./ಪ.ಪಂ. ಸೆಲ್/ನಿವೃತಿ ವೇತನ ಸೆಲ್ ಮತ್ತು ಆಡಳಿತ ಉಗ್ರಾಣ | |
| | ಎನ್. ಎಸ್. ಎಸ್. | |
| | (vii) ಸಾಮಾನ್ಯ ಗಣಕ ಕೇಂದ್ರ | |
| | (viii) ವಿದ್ಯಾಮಂಡಳ ವಿಭಾಗ | |
| | (ix) ಅಭಿವೃದ್ಧಿ ವಿಭಾಗ | |

| | | |
|---|---|---|
| | (xi) ವಿಶ್ವವಿದ್ಯಾಲಯ ಅಂಕಿ -ಸಂಖ್ಯೆ ಘಟಕ | |
| | (xii) ಇಂಜಿನಿಯರಿಂಗ ವಿಭಾಗ | |
| | (xiii) ಹಣಕಾಸು ವಿಭಾಗ | |
| | (xiv) ಪರೀಕ್ಷಾ ವಿಭಾಗ | |
| | (xv) ಗ್ರಂಥಾಲಯ | |
| | (xvi) ಕಾಲೇಜು ಅಭಿವೃದ್ಧಿ ಮಂಡಳಿ | |
| | (xvii) ಗಣಕ ಕೇಂದ್ರ | |
| | (xviii) ಆರೋಗ್ಯ ಕೇಂದ್ರ | |
| | (xix) ವಿಶ್ವವಿದ್ಯಾಲಯ ವಿಜ್ಞಾನ ಉಪಕರಣಗಳ ಕೇಂದ್ರ (ಯುಸಿಕ್) | |
| | (xx) ವಿಶ್ವವಿದ್ಯಾಲಯದ ವಸತಿ ಗೃಹಗಳು | |
| | (xxi) ವಿಶ್ವವಿದ್ಯಾಲಯದ ಶಾಲೆ | |
| | (xxii) ಉದ್ಯಾನವನ ವಿಭಾಗ | |
| | (xxiii) ಸ್ನಾತಕೋತ್ತರ ಅಧ್ಯಯನ ವಿಭಾಗಗಳು ಮತ್ತು ಸ್ನಾತಕೋತ್ತರ ಕೇಂದ್ರಗಳು | |
| 10 | 4 (1) (b) (x): ನಿಯಮಾವಳಿಗಳ ಪ್ರಕಾರ ಅಧಿಕಾರಿ/ನೌಕರರು ಮಾಸಿಕ ಸಂಭಾವನೆ ಪಡೆಯುವ ಮಾಹಿತಿ | 31-102 |
| 11 | 4 (1) (b) (xi): ಆಯವ್ಯಯದ ಅಂದಾಜು ಮತ್ತು ಹಂಚಿಕೆಗಳ ವಿವರ | 102 |
| 12 | 4 (1) (b) (xii): ಸಹಾಯಧನದ ಕಾರ್ಯಕ್ರಮಗಳ ಅನುಷ್ಠಾನ ಮತ್ತು ವಿವರಗಳು | 104 |
| 13 | 4 (1) (b) (xiii): ರಿಯಾಯತಿ ಮತ್ತು ಪರವಾನಗಿಯನ್ನು ಅಧಿಕೃತವಾಗಿ ಪಡೆದ ಫಲಾನುಭವಿಗಳ ವಿವರಗಳು | 104 |
| 14 | 4 (1) (b) (xiv): ವಿದ್ಯುನ್ಮಾನ ರೂಪದಲ್ಲಿರುವ ಮಾಹಿತಿಯ ವಿವರ | 104 |
| 15 | 4 (1) (b) (xv): ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಂಥಾಲಯ ನೀಡುವ ಸೌಲಭ್ಯ | 104 |
| 16 | 4 (1) (b) (xvi): ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮಗಳ ವಿವರ | 105 |
| 17 | 4 (1) (b) (xvii): ಇನ್ನಿತರ ಮಾಹಿತಿ, ಅನುಬಂಧ – ಅರ್ಜಿ ನಮೂನೆಗಳು | 105-112 |


**ಪರಿಚಯ :**

ಗುಲಬರ್ಗಾ ವಿಶ್ವವಿದ್ಯಾಲಯವು ಉತ್ತರ ಕರ್ನಾಟಕದಲ್ಲಿ ತೀವ್ರಗತಿಯಲ್ಲಿ ಬೆಳೆಯುತ್ತಿರುವ ಗುಲಬರ್ಗಾ ನಗರದಲ್ಲಿ ಸ್ಥಾಪಿಸಲ್ಪಟ್ಟಿದ್ದು , ಹೈದ್ರಾಬಾದ್ ಕರ್ನಾಟಕದ ಭಾಗದ ಜನರ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸುತ್ತದೆ. ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರವಾಗಿ ೧೯೭೦ರಲ್ಲಿ ಪ್ರಾರಂಭವಾಗಿ, ೧೦ನೇ, ಸೆಪ್ಟಂಬರ್ ೧೯೮೦ರಲ್ಲಿ ಸ್ವತಂತ್ರ ಗುಲಬರ್ಗಾ ವಿಶ್ವವಿದ್ಯಾಲಯವಾಗಿ ಪರಿವರ್ತನೆಯಾಯಿತು. ಇಂದು ಈ ವಿಶ್ವವಿದ್ಯಾಲಯದ ಕೇಂದ್ರ ಕಾರ್ಯಸ್ಥಾನ ಮತ್ತು ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಟ್ಟ ಬಳ್ಳಾರಿ, ಬೀದರ್, ರಾಯಚೂರು ಮತ್ತು ಸಂಡೂರು ಸ್ನಾತಕೋತ್ತರ ಕೇಂದ್ರಗಳಲ್ಲಿ ಒಟ್ಟು ೩೭ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗಗಳು ವಿಜ್ಞಾನ, ಸಮಾಜ ವಿಜ್ಞಾನ, ಕಲಾ, ವಾಣಿಜ್ಯ, ಶಿಕ್ಷಣ ಮತ್ತು ಕಾನೂನು ವಿಷಯಗಳಲ್ಲಿ ವಿದ್ಯಾರ್ಥಿಗಳಿಗಾಗಿ ಸ್ನಾತಕೋತ್ತರ ಅಧ್ಯಯನ ಎಂ. ಫಿಲ್. ಮತ್ತು ಪಿ.ಹೆಚ್. ಡಿ. ಪದವಿಗಳನ್ನು ಪಡೆಯಲು ಅವಕಾಶವಿದೆ. ಈ ವಿಶ್ವವಿದ್ಯಾಲಯದ ಆವರಣದಲ್ಲಿ ಒಂದು ಸುಸಜ್ಜಿತ ಕೇಂದ್ರ ಗ್ರಂಥಾಲಯವಿರುತ್ತದೆ. ಅಲ್ಲದೆ

ಇನ್‌ಸ್ಟ್ರುಮೆಂಟೇಶನ್ ಕೇಂದ್ರ, ಒಳಕ್ರೀಡಾಂಗಣ, ಹೊರ ಕ್ರೀಡಾಂಗಣ, ಆರೋಗ್ಯ ಕೇಂದ್ರ ಮತ್ತು ಗಣಕಯಂತ್ರ ಕೇಂದ್ರಗಳು ಇರುತ್ತವೆ. ಇಲ್ಲಿ ಐದು ವಿದ್ಯಾರ್ಥಿಗಳ ಮತ್ತು ಎರಡು ವಿದ್ಯಾರ್ಥಿನಿಯರ ವಸತಿ ಗೃಹಗಳು, ಅಧಿಕಾರಿಗಳ ಮತ್ತು ಸಿಬ್ಬಂದಿಗಳ ವಸತಿ ಸಮುಚ್ಚಯ ಕೂಡಾ ಈ ಆವರಣದಲ್ಲಿರುತ್ತವೆ. ಸುಮಾರು ೨೦೦೦ ವಿದ್ಯಾರ್ಥಿಗಳು ಪ್ರತಿ ವರ್ಷ ಸ್ನಾತಕೋತ್ತರ ಅಧ್ಯಯನದಲ್ಲಿ ಪ್ರವೇಶ ಪಡೆಯುತ್ತಾರೆ ಅಲ್ಲದೆ ಸುಮಾರು ೪೦,೦೦೦ ವಿದ್ಯಾರ್ಥಿಗಳು ನಮ್ಮ ವಿಶ್ವವಿದ್ಯಾಲಯದ ವ್ಯಾಪ್ತಿಯ ಅಧೀನಕ್ಕೊಳಪಟ್ಟ ಐದು ಜಿಲ್ಲೆಗಳ ಸುಮಾರು ೨೦೦ ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಮಾಹಿತಿ ಹಕ್ಕು ಕಾಯ್ದೆ ೨೦೦೫ರ ಪ್ರಕರಣ ೪ [೧][ಬಿ] ಅಡಿಯಲ್ಲಿ ನೀಡಬೇಕಾದ (i) ರಿಂದ (xvii) ರ ವರೆಗಿನ ೧೭ ಅಂಶಗಳ ಬಗ್ಗೆ ಗುಲಬರ್ಗಾ ವಿಶ್ವವಿದ್ಯಾಲಯದ ಮಾಹಿತಿಯನ್ನು ಈ ಕೆಳಗೆ ನೀಡಲಾಗಿದೆ.

**೪ [೧][ಬಿ] (i) ವಿಶ್ವವಿದ್ಯಾಲಯದ ಕಾರ್ಯ ಚಟುವಟಿಕೆ, ಕರ್ತವ್ಯ ಹಾಗೂ ಇತರ ಮಾಹಿತಿಗಳ ವಿವರ:**

ಗುಲಬರ್ಗಾ ವಿಶ್ವವಿದ್ಯಾಲಯವು ೧೯೭೬ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ ೩ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಗುಲಬರ್ಗಾ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿದೆ.

**ವಿಶ್ವವಿದ್ಯಾನಿಲಯದ ಅಧಿಕಾರಗಳು:**

ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ ೨೦೦೦ರ ಪ್ರಕಾರ ಇತರ ಉಪಬಂಧಗಳು ಮತ್ತು ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ನೇಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ವಿಶ್ವವಿದ್ಯಾನಿಲಯವು ಈ ಮುಂದಿನ ಅಧಿಕಾರಗಳನ್ನು ಹೊಂದಿರುತ್ತದೆ ಮತ್ತು ಈ ಮುಂದಿನ ಕರ್ತವ್ಯಗಳನ್ನು ನೆರವೇರಿಸುತ್ತದೆ.

- ತಾನು ಯುಕ್ತವೆಂದು ಭಾವಿಸುವಂತಹ ವ್ಯಾಸಂಗ ಶಾಖೆಗಳಲ್ಲಿ ಮತ್ತು ಅಧ್ಯಯನ ಕ್ರಮಗಳಲ್ಲಿ, ಶಿಕ್ಷಣ (ಅಂಚೆ ತೆರಪಿನ ಮೂಲಕ ಶಿಕ್ಷಣವೂ ಸೇರಿದಂತೆ), ಬೋಧನೆ ಮತ್ತು ತರಬೇತಿಯನ್ನು ಒದಗಿಸುವುದು ಮತ್ತು ಸಂಶೋಧನೆ ಹಾಗೂ ಜ್ಞಾನ ಪ್ರಸಾರಕ್ಕಾಗಿ ವ್ಯವಸ್ಥೆ ಮಾಡುವುದು.
- (ಎ) ಪರಿನಿಯಮಗಳು, ಆರ್ಡಿನೆನ್ಸ್‌ಗಳು ಅಥವಾ ವಿನಿಯಮಗಳ ಮೂಲಕ ನಿಯಮಿಸಲಾದ ರೀತಿಯಲ್ಲಿ, ಅವುಗಳಿಂದ ವಿನಾಯಿತಿಗೊಳಿಸಲಾಗಿದ್ದ ಹೊರತು, ವಿಶ್ವವಿದ್ಯಾನಿಲಯದಲ್ಲಿ ಅಥವಾ ಯಾವುದೇ ಕಾಲೇಜಿನಲ್ಲಿ ಅಧ್ಯಯನ ಕ್ರಮವನ್ನು ಅನುಸರಿಸಿರುವ ಮತ್ತು ಪರಿನಿಯಮಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯ ಮಗಳ ಮೂಲಕ ನಿಯಮಿಸಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ;
- (ಬಿ) ಪರಿನಿಯಮಗಳು ಅಥವಾ ಆರ್ಡಿನೆನ್ಸ್‌ಗಳ ಮೂಲಕ ನಿಯಮಿಸಲಾದ ಷರತ್ತುಗಳ ಅಡಿಯಲ್ಲಿ ಸಂಶೋಧನೆ ನಡೆಸಿರುವ, ಅಂತಹ ವ್ಯಕ್ತಿಗಳಿಗೆ, ಪರೀಕ್ಷೆಗಳನ್ನು ನಡೆಸುವುದು ಮತ್ತು ಪದವಿಗಳು, ಡಿಪ್ಲೋಮಾಗಳು ಅಥವಾ ಇತರ ಶೈಕ್ಷಣಿಕ ಪದವಿಗಳನ್ನು ನೀಡುವುದು ಮತ್ತು ಪ್ರದಾನ ಮಾಡುವುದು;
- ಪರಿನಿಯಮಗಳ ಮೂಲಕ ವಿಧಿಸಲಾದ ರೀತಿಯಲ್ಲಿ ವ್ಯಕ್ತಿಗಳಿಗೆ ಗೌರವ ಪದವಿಗಳನ್ನು ಅಥವಾ ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;
- ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಪಟ್ಟಿಯಲ್ಲಿ ಸೇರಿಲ್ಲದ ವ್ಯಕ್ತಿಗಳಿಗೆ, ವಿಶ್ವವಿದ್ಯಾನಿಲಯವು ನಿರ್ಧರಿಸಬಹುದಾದಂತಹ ಡಿಪ್ಲೊಮಾಗಳನ್ನು ನೀಡುವುದು ಮತ್ತು ಅಂಥಹ ಉಪನ್ಯಾಸ ಮತ್ತು ಬೋಧನೆಗಳ ವ್ಯವಸ್ಥೆ ಮಾಡುವುದು.
- ವಿಶ್ವವಿದ್ಯಾಲಯವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂತಹ ಉದ್ದೇಶಗಳಿಗಾಗಿ ಇತರ ವಿಶ್ವವಿದ್ಯಾನಿಲಯಗಳೊಡನೆ ಮತ್ತು ಪ್ರಾಧಿಕಾರಗಳೊಡನೆ ಸಹಕರಿಸುವುದು;
- ಪ್ರಾಧ್ಯಾಪಕರ, ರೀಡರುಗಳ, ಉಪನ್ಯಾಸಕರ ಮತ್ತು ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಇತರ ಯಾವುದೇ ಬೋಧಕ ಹುದ್ದೆಗಳನ್ನು ಸ್ಥಾಪಿಸುವುದು, ಅಮಾನತುಗೊಳಿಸುವು ಅಥವಾ ರದ್ದುಗೊಳಿಸುವುದು;
- ಫೆಲೋಷಿಪ್, ಸಂಚಾರಿ ಫೆಲೋಷಿಪ್, ವಿದ್ಯಾರ್ಥಿ ವೇತನಗಳು, ಶಿಷ್ಯ ವೇತನಗಳು, ವೃತ್ತಿವೇತನಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಸ್ಥಾಪಿಸುವುದು ಮತ್ತು ನೀಡುವುದು;
- ಕಾಲೇಜುಗಳು, ಪ್ರಯೋಗಶಾಲೆಗಳು, ಗ್ರಂಥಾಲಯಗಳು, ವಸ್ತುಸಂಗ್ರಹಾಲಯಗಳು ಮುದ್ರಣಾಲಯಗಳು, ಸಂಶೋಧನಾ ಸಂಸ್ಥೆಗಳು, ವಿದ್ಯಾ ವಿಷಯಕ್ಕೆ ಮತ್ತು ಆಡಳಿತ ತರಬೇತಿಗೆ ಸಂಬಂಧಿಸಿದ ಸಂಸ್ಥೆಗಳನ್ನು ಮತ್ತು ವಿಶ್ವವಿದ್ಯಾನಿಲಯದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಅವಶ್ಯಕವಾದ ಇತರ ಸಂಸ್ಥೆಗಳನ್ನು ನಿರ್ವಹಿಸುವುದು ಮತ್ತು ಅವುಗಳ ಆಡಳಿತವನ್ನು ನಡೆಸುವುದು;

- ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಮತ್ತು ಆಡಳಿತ ನಡೆಸುವುದು;
- ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನಿವಾಸ ಮತ್ತು ಶಿಸ್ತಿನ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವುದು;
- ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಆರೋಗ್ಯ ಮತ್ತು ಸಾಮಾನ್ಯ ಕಲ್ಯಾಣವನ್ನು ವೃದ್ಧಿಗೊಳಿಸುವುದಕ್ಕಾಗಿ ಏರ್ಪಾಟುಗಳನ್ನು ಮಾಡುವುದು;
- ಆರ್ಡಿನೆನ್ಸ್‍ಗಳ ಮೂಲಕ ನಿಯಮಿಸಬಹುದಾದ ಅಂಥ ಶುಲ್ಕಗಳನ್ನು ಮತ್ತು ಇತರ ಚಾರ್ಜುಗಳನ್ನು ನಿಗದಿಪಡಿಸುವುದು, ವಸೂಲಿ ಮಾಡುವುದು, ತಗಾದೆ ಮಾಡುವುದು ಮತ್ತು ಪರಿಷ್ಕರಿಸುವುದು;
- ವಿದ್ಯಾರ್ಥಿನಿಯರಿಗೆ ಮತ್ತು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಹಾಗೂ ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ನಿವಾಸ, ಶಿಸ್ತು ಮತ್ತು ಬೋಧನೆಗೆ ಸಂಬಂಧಿಸಿದಂತೆ ವಿಶೇಷ ಏರ್ಪಾಡುಗಳನ್ನು ಮಾಡುವುದು;
- ಪರಿನಿಯಮಗಳ ಮೂಲಕ ಆಡಳಿತಾತ್ಮಕ, ಲಿಪಿಕ ಮತ್ತು ಇತರ ಅವಶ್ಯ ಬೋಧಕೇತರ ಹುದ್ದೆಗಳನ್ನು ಸೃಜಿಸುವುದು;
- ವಿಶ್ವವಿದ್ಯಾನಿಲಯದ ಉದ್ದೇಶಕ್ಕಾಗಿ ಅನುದಾನ, ಮರಣಶಾಸನದ ಮೂಲಕ ಅಥವಾ ಅನ್ಯಥಾ ವಿಶ್ವವಿದ್ಯಾನಿಲಯದಲ್ಲಿ ನಿಹಿತವಾಗಬಹುದಾದ ಯಾವುದೇ ದತ್ತಿಗಳು, ದೇಣಿಗೆಗಳು ಅಥವಾ ನಿಧಿಗಳನ್ನು ಅಂಗೀಕರಿಸುವುದು, ಧಾರಣ ಮಾಡುವುದು ಮತ್ತು ನಿರ್ವಹಿಸುವುದು ಹಾಗೂ ಯುಕ್ತವೆಂದು ಭಾವಿಸಬಹುದಾದ ಯಾವುದೇ ರೀತಿಯಲ್ಲಿ ಅಂತಹ ದತ್ತಿಗಳನ್ನು, ದೇಣಿಗೆಗಳನ್ನು ಅಥವಾ ನಿಧಿಗಳನ್ನು ತೊಡಗಿಸುವುದು;
- ಪರಂತು, ವಿದೇಶದಿಂದ, ವಿದೇಶಿ ಪ್ರತಿಷ್ಠಾನದಿಂದ ಅಥವಾ ಅಂಥ ದೇಶದಲ್ಲಿರುವ ಯಾವೊಬ್ಬ ವ್ಯಕ್ತಿಯಿಂದ ದೇಣಿಗೆಯನ್ನು ರಾಜ್ಯ ಸರ್ಕಾರದ ಅನುಮೋದನೆಯಿಲ್ಲದೆ ಅಂಗೀಕರಿಸತಕ್ಕದ್ದಲ್ಲ.
- ಪ್ರತಿಭೆ, ಸಂಶೋಧನೆ ಹಾಗೂ ಸಾಮಾನ್ಯ ಜ್ಞಾನದ ಕೃತಿಗಳ ಪ್ರಕಟಣೆಯನ್ನು ಕೈಗೊಳ್ಳುವುದು;
- ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಅಥವಾ ನೌಕರರಿಗೆ ಸಂಬಂಧಿಸಿದಂತೆ ಯುನಿಯನ್‍ಗಳನ್ನು ಮತ್ತು ಅಸೋಸಿಯೇಷನಗಳನ್ನು ಸಂಘಟಿಸುವುದು, ಪ್ರೋತ್ಸಾಹಿಸುವುದು, ವಿನಿಯಮಿಸುವುದು ಮತ್ತು ನಿಯಂತ್ರಿಸುವುದು;
- ಪರಿನಿಯಮಗಳ ಮೂಲಕ ವಿಶ್ವವಿದ್ಯಾನಿಲಯಗಳ ಪ್ರಾಧಿಕಾರಗಳೆಂದು ಘೋಷಿಸಲಾಗುವ ಅಂಥ ನಿಕಾಯಗಳನ್ನು ನಿರ್ವಹಿಸುವುದು;
- ವಿಶ್ವವಿದ್ಯಾನಿಲಯವು ನಿರ್ವಹಿಸದೆ ಇರುವ ಶಿಕ್ಷಣ ಸಂಸ್ಥೆಗಳನ್ನು ಸಂಯೋಜಿತ ಕಾಲೇಜುಗಳಾಗಿ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಪ್ರವೇಶ ಕೊಡುವುದು;
- (ಎ) ಶಾರೀರಿಕ ತರಬೇತಿಗೆ;<br>(ಬಿ) ವಿದ್ಯಾರ್ಥಿ ಯೂನಿಯನ್‍ಗಳಿಗೆ, ಮತ್ತು;<br>(ಸಿ) ಕ್ರೀಡಾ ಮತ್ತು ಅಥ್ಲೆಟಿಕ್ ಕ್ಲಬ್ಬುಗಳಿಗೆ;

ವಿಶ್ವವಿದ್ಯಾನಿಲಯದ ನಿಧಿಗಳಿಂದ ಅನುದಾನಗಳನ್ನು ಕೊಡುವುದು.

- ಸಂಯೋಜಿತಗೊಂಡ ಕಾಲೇಜುಗಳಿಗೆ ಅಗತ್ಯವಾಗಬಹುದಾದಂಥ ಬೋಧನೆ ಮತ್ತು ಮಾರ್ಗದರ್ಶನವನ್ನು ತನ್ನ ಪ್ರಾಧ್ಯಾಪಕರು ಮತ್ತು ಇತರ ಅಧ್ಯಾಪಕರು ಮತ್ತು ವಿಭಾಗಗಳು ಹಾಗೂ ವಿಶೇಷ ಸಂಶೋಧನಾ ಸಂಸ್ಥೆಗಳ ಮೂಲಕ ಒದಗಿಸುವದು ಮನ್ನಣೆ ಕೊಡುವುದು ಮತ್ತು ಅಂಥ ಮನ್ನಣೆಯನ್ನು ಹಿಂತೆಗೆದುಕೊಳ್ಳುವುದು;
- ಪರಿನಿಯಮಗಳ ಮೂಲಕ ಕಾಲಕಾಲಕ್ಕೆ ನಿಯಮಿಸಬಹುದಾದಂತಹ ನಿಭಂದನೆಗಳು ಮತ್ತು ಷರತ್ತುಗಳ ಮೇಲೆ ಯಾವುದೇ ಉದ್ಧೇಶಕ್ಕಾಗಿ ಯಾವುದೇ ಸಂಸ್ಥೆಗೆ ಪೂರ್ಣವಾಗಿ ಅಥವಾ ಭಾಗಶ:
- ಈ ಮೇಲೆ ಹೇಳಿದ ಅಧಿಕಾರಕ್ಕೆ ಪ್ರಾಸಂಗಿಕವಾಗಿರಲಿ ಅಥವಾ ಇಲ್ಲದಿರಲಿ, ಕೃಷಿ, ಆರೋಗ್ಯ ವಿಜ್ಞಾನ, ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನಗಳನ್ನು ಹೊರತುಪಡಿಸಿ, ವಿಶೇಷವಾಗಿ ವಿಶ್ವವಿದ್ಯಾಲಯದ ಉದ್ದೇಶಗಳನ್ನು ಮುಂದುವರಿಸಲು ಮತ್ತು ಸಾಮಾನ್ಯವಾಗಿ ಕಲೆ, ವಿಜ್ಞಾನ, ವಾಣಿಜ್ಯ ಹಾಗೂ ವ್ಯವಸ್ಥಾಪನೆ ಅವಶ್ಯಕವಾಗಬಹುದಾದ ಇತರ ಕಾರ್ಯಗಳನ್ನು ಮತ್ತು ವಿಷಯಗಳನ್ನು ಕೈಗೊಳ್ಳುವುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನದಲ್ಲಿ ಘಟಕ ಕಾಲೇಜುಗಳನ್ನು ಹೊಂದಿರುವ ವಿಶ್ವವಿದ್ಯಾನಿಲಯಗಳು, ಆ ಸಂಬಂಧದಲ್ಲಿ ಈ ಅಧಿನಿಯಮದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವುದು ಮುಂದುವರಿಯುತ್ತದೆ.

ಅಧಿಕಾರ ವ್ಯಾಪ್ತಿ, ವಿಶೇಷಾಧಿಕಾರಿ ಇತ್ಯಾದಿಗಳಿಗೆ ಪ್ರವೇಶಾವಕಾಶ ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದ ಹೊರತು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಪ್ರದತ್ತವಾದ ವಿಶ್ವವಿದ್ಯಾನಿಲಯದ ಅಧಿಕಾರಗಳನ್ನು ವಿಶ್ವವಿದ್ಯಾನಿಲಯ ಪ್ರದೇಶದಲ್ಲಿ ಚಲಾಯಿಸತಕ್ಕದ್ದು ಮತ್ತು ಸದರಿ ಪ್ರದೇಶದ ಹೊರಗಡೆ ಇರುವ ಯಾವುದೇ ಶಿಕ್ಷಣ ಸಂಸ್ಥೆಯು, ವಿಶ್ವವಿದ್ಯಾನಿಲಯದ ಯಾವುದೇ ವಿಶೇಷಾಧಿಕಾರಗಳೊಡನೆ ಸಹವರ್ತಿಸತಕ್ಕದ್ದಲ್ಲ ಅಥವಾ ಅವುಗಳಿಗೆ ಪ್ರವೇಶ ಪಡೆಯುತಕ್ಕದ್ದಲ್ಲ:

ಪರಂತು, ಅಂಚೆ ತೆರಪಿನ ಶಿಕ್ಷಣ ಮೂಲಕ, ವ್ಯಾಸಂಗ ಕ್ರಮಗಳ ಅಥವಾ ಬಾಹ್ಯ ಪದವಿ ವ್ಯಾಸಂಗ ಕ್ರಮಗಳ ಪ್ರಯೋಜನವನ್ನು ವಿಶ್ವವಿದ್ಯಾಲಯವು, ವಿಶ್ವವಿದ್ಯಾನಿಲಯ ಪ್ರದೇಶದ ಹೊರಗಡೆ ಇರುವ ವಿದ್ಯಾರ್ಥಿಗಳಿಗೆ ವಿಸ್ತರಿಸಬಹುದು:

ಮತ್ತು ಪರಂತು, ಸಂಯೋಜನೆಯನ್ನು ಮಂಜೂರು ಮಾಡುವ ಮೂಲಕ ವಿಶ್ವವಿದ್ಯಾಲಯದೊಡನೆ ದೇಶದ ಹೊರಗಿನ ಶಿಕ್ಷಣ ಸಂಸ್ಥೆಯು ಸಂಯೋಜಿತವಾಗತಕ್ಕದ್ದು ಮತ್ತು ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಗಳಿಗೆ ಪ್ರವೇಶ ಪಡೆಯತಕ್ಕದ್ದು. ಅಂಥ ಅಧಿಕಾರಗಳನ್ನು ವಿಶ್ವವಿದ್ಯಾನಿಲಯವು, ೫೫ನೇ ಪ್ರಕರಣದಲ್ಲಿ ನಿಯಮಿಸಲಾದ ರೀತಿಯಲ್ಲಿ ಚಲಾಯಿಸತಕ್ಕದ್ದು.

ಅಲ್ಲದೆ ಪರಂತು, ಒಂದು ವಿಶ್ವವಿದ್ಯಾನಿಲಯದ ಪ್ರದೇಶದೊಳಗೆ ಇರುವ ಒಂದು ಶಿಕ್ಷಣ ಸಂಸ್ಥೆಯು, ಯಾವುದೇ ಇತರ ವಿಶ್ವವಿದ್ಯಾನಿಲಯದೊಡನೆ ಸಹವರ್ತಿಸಬಹುದು ಅಥವಾ ವಿಶೇಷಾಧಿಕಾರಗಳಿಗೆ ಪ್ರವೇಶ ಪಡೆಯಬಹುದು ಅಥವಾ ಒಂದು ಕಾಲೇಜು ಯಾವ ವಿಶ್ವವಿದ್ಯಾನಿಲಯದ ಅಧಿಕಾರ ವ್ಯಾಪ್ತಿಯೊಳಗೆ ಇರುವುದೋ ಆ ವಿಶ್ವವಿದ್ಯಾನಿಲಯದೊಡನೆ ಸಮಾಲೋಚಿಸಿ, ಸರ್ಕಾರದ ನಿರ್ದಿಷ್ಟ ಮಂಜೂರಾತಿಯೊಡನೆ, ವಿದೇಶಿ ವಿಶ್ವವಿದ್ಯಾನಿಲಯಗಳೂ ಸೇರಿದಂತೆ, ಸ್ಥಾಪಿತವಾದ ಮತ್ತು ನಿಯಮಿತವಾದ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತವಾಗಬಹುದು. ಅಂಥ ಮಂಜೂರಾತಿ ನೀಡುವ ರೀತಿ ಮತ್ತು ಕಾರ್ಯ ವಿಧಾನವು ಪರಿನಿಯಮಗಳಲ್ಲಿ ನಿಯಮಿಸಬಹುದು.

ವಿವರಣೆ:- ಈ ಪ್ರಕರಣದ ಉದ್ದೇಶಕ್ಕಾಗಿ 'ವಿದೇಶಿ ವಿಶ್ವವಿದ್ಯಾನಿಲಯ' ಎಂದರೆ ಸಂಸತ್ತಿನ ಅಥವಾ ಒಂದು ರಾಜ್ಯ ವಿಧಾನಮಂಡಲದ ಅಧಿನಿಯಮದ ಅಡಿಯಲ್ಲಿ ಭಾರತದ ಒಳಗಡೆ ಸ್ಥಾಪಿತವಾದ ವಿಶ್ವವಿದ್ಯಾನಿಲಯವಾಗಿರದ ಒಂದು ವಿಶ್ವವಿದ್ಯಾನಿಲಯ.

ವಿಶ್ವವಿದ್ಯಾನಿಲಯವು ಎಲ್ಲಾ ವರ್ಗಗಳ ವ್ಯಕ್ತಿಗಳಿಗೂ ಮುಕ್ತವಾಗಿದೆ.

(೧) ವಿಶ್ವವಿದ್ಯಾನಿಲಯವು, ಎಲ್ಲಾ ವ್ಯಕ್ತಿಗಳಿಗೆ, ಅವರು ಹೆಣ್ಣಾಗಿರಲಿ ಅಥವಾ ಗಂಡಾಗಿರಲಿ ಮತ್ತು ಯಾವುದೇ ಜನಾಂಗ, ಪಂಥ, ಜಾತಿ ಅಥವಾ ವರ್ಗಕ್ಕೆ ಸೇರಿರಲಿ, ಮುಕ್ತವಾಗಿದೆ ಮತ್ತು ಅದಕ್ಕೆ ಅಧ್ಯಾಪಕನಾಗಿ ಅಥವಾ ವಿದ್ಯಾರ್ಥಿಯಾಗಿ ಪ್ರವೇಶ ಪಡೆಯಲು ಅಥವಾ ಅದರಲ್ಲಿ ಯಾವುದೇ ಹುದ್ದೆಯನ್ನು ಧಾರಣ ಮಾಡಲು ಅಥವಾ ಅದರಲ್ಲಿ ಪದವೀಧರನಾಗಲು ಅಥವಾ ಅದರ ಯಾವುದೇ ವಿಶೇಷಾಧಿಕಾರವನ್ನು ಅನುಭವಿಸಲು ಅಥವಾ ಚಲಾಯಿಸಲು ಹಕ್ಕುಳ್ಳವನಾಗಿರುವುದಕ್ಕೆ ಯಾವುದೇ ಧಾರ್ಮಿಕ ನಂಬಿಕೆ ಅಥವಾ ನಿಷ್ಠೆಯ ಬಗ್ಗೆ ಯಾವನೇ ವ್ಯಕ್ತಿಯ ಮೇಲೆ ಯಾವುದೇ ಅರ್ಹತೆಯನ್ನು ವಿಶ್ವವಿದ್ಯಾನಿಲಯವು ವಿಧಿಸುವುದು ಕಾನೂನು ಬದ್ಧವಾಗಿಲ್ಲ.

(೨) (೧)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾನಿಲಯವು, ರಾಜ್ಯ ಸರ್ಕಾರದ ವಿಶೇಷ ಅಥವಾ ಸಾಮಾನ್ಯ ನಿರ್ದೇಶನಗಳಿಗನುಸಾರವಾಗಿ, ಈ ಕೆಳಕಂಡ ವರ್ಗಗಳ ವ್ಯಕ್ತಿಗಳಿಗಾಗಿ, ವಿಶ್ವವಿದ್ಯಾನಿಲಯವು ನಿರ್ವಹಿಸುತ್ತಿರುವ ಅಥವಾ ನಿಯಂತ್ರಿಸುತ್ತಿರುವ ಯಾವುದೇ ಕಾಲೇಜು ಅಥವಾ ಸಂಸ್ಥೆಯಲ್ಲಿ ವಿದ್ಯಾರ್ಥಿಗಳ ಪ್ರವೇಶದ ಉದ್ದೇಶಗಳಿಗಾಗಿ ಸ್ಥಾನಗಳನ್ನು ಮೀಸಲಿರಿಸುತ್ತದೆ.

- ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು;
- ಇತರ ಹಿಂದುಳಿದ ವರ್ಗಗಳು;
- ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದವರು;
- ರಕ್ಷಣಾ ಸಿಬ್ಬಂದಿ ಮತ್ತು ಮಾಜಿ ಸೈನಿಕರು ಮತ್ತು ಅವರ ಮಕ್ಕಳು;

- ದೈಹಿಕವಾಗಿ ಅಂಗವಿಕಲತೆಯುಳ್ಳ ವ್ಯಕ್ತಿಗಳು (ಸಮಾನ ಅವಕಾಶಗಳು, ಹಕ್ಕುಗಳ ಸಂರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) ಅಧಿನಿಯಮ, ೧೯೯೬ರ ಕೇಂದ್ರ ಅಧಿನಿಯಮ ೧) ಅಡಿಯಲ್ಲಿ ಪರಿಭಾಷಿಸಲಾದ ಅಂಗವಿಕಲರು:

೩) ವಿಶ್ವವಿದ್ಯಾನಿಲಯವು, ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಆದೇಶಗಳಿಗೊಳಪಟ್ಟು, ಊಟ, ವಸತಿಗಳ ಶುಲ್ಕ ಅಥವಾ ಇತರ ವೆಚ್ಚಗಳನ್ನು ಸಂದಾಯ ಮಾಡುವುದರಿಂದ ವಿನಾಯಿತಿ ಕೊಡಬಹುದು ಅಥವಾ ವಿಶೇಷ ವಿದ್ಯಾರ್ಥಿ ವೇತನಗಳನ್ನು ನೀಡಬಹುದು.

**ವಿಶ್ವವಿದ್ಯಾನಿಲಯದಲ್ಲಿ ಬೋಧನೆ ಮತ್ತು ಸಂಶೋಧನೆ:**

೧) ವಿದ್ಯಾವಿಷಯಕ ಪರಿಷತ್ತಿನ ನಿಯಂತ್ರಣಕ್ಕೊಳಪಟ್ಟು ವಿಶ್ವವಿದ್ಯಾನಿಲಯದ ವ್ಯಾಸಂಗ ಕ್ರಮಕ್ಕೆ ಸಂಬಂಧಪಟ್ಟಂತೆ ಎಲ್ಲ ಮನ್ನಣೆ ಪಡೆದ ಬೋಧನೆಯನ್ನು, ವಿನಿಯಮಗಳ ಮೂಲಕ ನಿಯಮಿಸಲಾದ ಪಠ್ಯಕ್ರಮಕ್ಕನುಸಾರವಾಗಿ ವಿಶ್ವದ್ಯಾನಿಲಯದ ಅಧ್ಯಾಪಕರು ನಡೆಸುತ್ತಾರೆ ಮತ್ತು ಅದು ಉಪನ್ಯಾಸ ನೀಡುವುದು, ಪ್ರಯೋಗಶಾಲಾ ಕೆಲಸ ಮತ್ತು ಇತರ ಬೋಧನಾ ವಿಧಾನವನ್ನು ಒಳಗೊಂಡಿದೆ.

೨) ಅಂಥ ಎಲ್ಲಾ ಬೋಧನೆಯನ್ನು ಆರ್ಡಿನೆನ್ಸ್‌ಗಳು ಮತ್ತು ವಿನಿಮಯಗಳ ಮೂಲಕ ನಿಯಮಿಸಬಹುದಾದಂತೆ ಪ್ರಾಧಿಕಾರಗಳು ವ್ಯವಸ್ಥೆಗೊಳಿಸುತ್ತದೆ.

೩) ವ್ಯಾಸಂಗ ಕ್ರಮಗಳು ಮತ್ತು ಪಠ್ಯವಿಷಯಕಗಳು, ಆರ್ಡಿನೆನ್ಸ್‌ಗಳು ಮತ್ತು ವಿನಿಯಮಗಳ ಮೂಲಕ ನಿಯಮಿಸಬಹುದು.